ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾರಣ್ಯಪುರ ಉಪ ವಿಭಾಗದ Improvements to roads, drains and Drilling borewells in ward no.09, 10 11 of Vidyaranyapura Sub Division (Number of Works 11) ಕಾಮಗಾರಿಗಳಿಗೆ ಆಡಳಿತ್ಮಾಕ ಹಾಗೂ ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ನಅಇ 449 ಎಸ್‌ಎಫ್‌ಸಿ 2015, ದಿನಾಂಕ: 24-11-2015.
2. ಸರ್ಕಾರದ ಆದೇಶ ಸಂಖ್ಯೆ: ನಅಇ 08 ಎಸ್‌ಎಫ್‌ಸಿ 2016, ದಿನಾಂಕ: 23-01-2016.
3. ಆಯುಕ್ತರು, ಬಿ.ಬಿ.ಎಂ.ಪಿ. ಪತ್ರ ಸಂಖ್ಯೆ: ಆಯುಕ್ತರು/ಪಿಆರ್/706/2016-17, ದಿನಾಂಕ: 29-12-2016.
4. ದಿನಾಂಕ: 27-01-2017 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 24-11-2015ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2015-16ನೇ ಸಾಲಿನಲ್ಲಿ ಘೋಷಿಸಿರುವ ರೂ.1000.00 ಕೋಟಿ ವಿಶೇಷ ಅನುದಾನದಡಿ ಕೈಗೊಳ್ಳುವ ರೂ.797.26 ಕೋಟಿಗಳ ಅಂದಾಜು ವೆಚ್ಚಕ್ಕೆ ಒಟ್ಟು 1156 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಸದರಿ ಆದೇಶದಲ್ಲಿ ಆಯುಕ್ತರು ದಿನಾಂಕ: 28-12-2016 ರಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳು ಒಳಗೊಂಡಿರುತ್ತದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 23-01-2016ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 449 ಎಸ್‌ಎಫ್‌ಸಿ 2015, ದಿನಾಂಕ: 24-11-2015 ರಲ್ಲಿ ನೀಡಿರುವ ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ: 1156ರ ಕಾಮಗಾರಿಯನ್ನು ಹೊರತುಪಡಿಸಿ, ಉಳಿದಂತೆ ಎಲ್ಲಾ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ.ಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದನೆ ನೀಡಲಾಗಿರುತ್ತದೆ.

3. ಮೇಲೆ (3) ರಲ್ಲಿ ಓದಲಾದ ದಿನಾಂಕ: 29-12-2016ರ ಪತ್ರದಲ್ಲಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ದಿನಾಂಕ: 24-11-2015ರ ಆದೇಶದನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾರಣ್ಯಪುರ ಉಪ ವಿಭಾಗದ Improvements to roads, drains and Drilling borewells in ward no.09 (Sl No. 130, 133, 136 to 138, 142), 10 (Sl No. 144 to 146) 11 (Sl No. 151,152) of Vidyaranyapura Sub Division (Number of Works 11) ಒಟ್ಟುಗೂಡಿಸಿ ರೂ.305.00 ಲಕ್ಷಗಳಿಗೆ ಪ್ಯಾಕೇಜ್‌ವಾರು ಕಾಮಗಾರಿಗಳಿಗೆ ದಿನಾಂಕ: 01-02-2016 ರಂದು ದ್ವಿ ಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಮುಖ್ಯ ಅಭಿಯಂತರರು (ಯಲಹಂಕ) ರವರು ಆದೇಶಿಸಿರುವಂತೆ ದಿನಾಂಕ: 26-04-2016 ರಂದು

...2.

ಮುಖ್ಯ ಅಭಿಯಂತರರ ಅಧ್ಯಕ್ಷತೆಯಲ್ಲಿ ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಚರ್ಚಿಸಿ, ಬ್ಯಾಟರಾಯನಪುರ ವಿಭಾಗದ ಪ್ಯಾಕೇಜ್‌ರ ಕಾಮಗಾರಿಗೆ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಕಾಮಗಾರಿಯ ಹೆಸರು	ಯೋಜನಾ ಮೊತ್ತ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು	ಷರಾ
1.	Improvements to roads, drains and Drilling borewells in ward no.09, 10 11 of Vidyaranyapura Sub Division (Number of Works 11)	305	262.25	ಶ್ರೀ ಕೆ.ಬಿ. ಅಲಂಕಾರ್	ಅರ್ಹರಾಗಿರುತ್ತಾರೆ.

4. ಸದರಿ ಪ್ಯಾಕೇಜ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ: 21-03-2016 ರಂದು ತೆರೆಯಲಾಗಿರುತ್ತದೆ. ದಿನಾಂಕ: 28-04-2016 ರಂದು ನಡೆದ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ಸದರಿ ಪ್ಯಾಕೇಜ್‌ನ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಗುತ್ತಿಗೆದಾರರು ಸಲ್ಲಿಸಿರುವ ಟೆಂಡರ್ ತಾಂತ್ರಿಕವಾಗಿ ಅರ್ಹರಾಗಿರುವುದರಿಂದ ದಿನಾಂಕ: 29-04-2016 ರಂದು ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು, ವಿವರ ಕೆಳಕಂಡಂತಿರುತ್ತದೆ.

ಕ್ರ ಸಂ.	ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) SR-2015-16	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂ.ಗಳಲ್ಲಿ)	2016-17ನೇ ಸಾಲಿನ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ದಿ: 09-02-2016
1.	ಶ್ರೀ ಕೆ.ಬಿ. ಅಲಂಕಾರ್	305.00	262.25	25615718.16	+0.93% ರಷ್ಟು ಹೆಚ್ಚು

5. ಮೇಲಿನ ದರಗಳಂತೆ ಗುತ್ತಿಗೆದಾರರಾದ ಶ್ರೀ ಕೆ.ಬಿ. ಅಲಂಕಾರ್ ರವರು ನಮೂದಿಸಿರುವ ಮೊತ್ತ ರೂ.2,56,15,718.16 ಗಳಾಗಿದ್ದು, ಟೆಂಡರ್‌ಗಿಟ್ಟ ಮೊತ್ತ ರೂ.262.25 ಲಕ್ಷಗಳಿಗೆ ಹೋಲಿಸಿದಾಗ ಶೇ. +0.93% ರಷ್ಟು ಹೆಚ್ಚಿಗೆ ಇದ್ದು, ಕಾಮಗಾರಿಗಳ ಅಂದಾಜು ಮೊತ್ತ ರೂ.305.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಗುತ್ತಿಗೆದಾರರಾದ ಶ್ರೀ ಕೆ.ಬಿ. ಅಲಂಕಾರ್ ರವರು ನಮೂದಿಸಿರುವ ಮೊತ್ತ ರೂ.2,56,15,718.16 ಕೋಟಿಗಳ ಅನುಮೋದಿತ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.2.32 ಕಡಿಮೆ ಇದ್ದು, 2016-17ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.0.93 ಹೆಚ್ಚು ಮೊತ್ತದ ಟೆಂಡರ್‌ಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

...3.

6. ಮೇಲೆ (4) ರಲ್ಲಿ ಓದಲಾದ ದಿನಾಂಕ: 27-01-2017 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ನಿರ್ಣಯಿಸಿದಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 05 ಎಂಎನ್‌ವೈ 2017,
ಬೆಂಗಳೂರು, ದಿನಾಂಕ: 17-02-2017.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ದಿನಾಂಕ: 27-01-2017 ರಂದು ನಡೆದ ಅಧಿಕಾರಯುಕ್ತ ಸಮಿತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾರಣ್ಯಪುರ ಉಪ ವಿಭಾಗದ Improvements to roads, drains and Drilling borewells in ward no.09 (Sl No. 130, 133, 136 to 138, 142), 10 (Sl No. 144 to 146) 11 (Sl No. 151,152) of Vidyaranyapura Sub Division (Number of Works 11)ರ ಕಾಮಗಾರಿಗಳಿಗೆ ರೂ.305.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಗುತ್ತಿಗೆದಾರರಾದ ಶ್ರೀ ಕೆ.ಬಿ. ಅಲಂಕಾರ್ ರವರು ನಮೂದಿಸಿರುವ ಮೊತ್ತ ರೂ.2.56157 ಕೋಟಿಗಳಿಗೆ ಅಧಿಕಾರಯುಕ್ತ ಸಮಿತಿಯು ತೀರ್ಮಾನಿಸಿದಂತೆ (2015-16ನೇ ಸಾಲಿನ ಚಾಲ್ತಿ ದರಗಳಿಗೆ ದಿನಾಂಕ: 02-09-2016ರ ದರಗಳಂತೆ ಶೇ.0.93% ರಷ್ಟು ಹೆಚ್ಚಿನ ದರಗಳಿಗೆ ಮಿತಿಗೊಳಿಸಲಾಗಿದೆ) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್‌ಗೆ ಸರ್ಕಾರದ ಅನುಮೋದನೆ ನೀಡಿದೆ.

1. ಮೇಲಿನ ಕಾಮಗಾರಿಯನ್ನು ಕೆ.ಟಿ.ಪಿ.ಪಿ. ಕಾಯ್ದೆ/ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.
2. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016 ರಲ್ಲಿ ಮುಂದುವರೆದ ಕಾಮಗಾರಿಗಾಗಿ 2016-17ನೇ ಸಾಲಿನಲ್ಲಿ ಮೀಸಲಿಟ್ಟ ನಗರೋತ್ಥಾನ ಯೋಜನೆಯ ಅನುದಾನದಿಂದ ಭರಿಸುವುದು.
3. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.
4. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಹಾಗೂ ಬದಲಿ ಕಾಮಗಾರಿಗಳು ಇದ್ದಲ್ಲಿ ಸದರಿ ಬದಲಿ ಕಾಮಗಾರಿಗಳಿಗೆ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆಯೇ ಎಂದು ಖಾತರಿ ಪಡಿಸಿಕೊಳ್ಳತಕ್ಕದ್ದು.
5. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.
6. ಚಾಲ್ತಿ ನಿಯಮಗಳನ್ವಯ ಮೇಲಿನ ಕಾಮಗಾರಿಯ ಒಟ್ಟಾರೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ಕಾಮಗಾರಿಯ ಅಂತಿಮ ಬಿಲ್ಲನ್ನು ಪಾವತಿಸುವುದಕ್ಕಿಂತ ಮೊದಲು ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕಿಂತ ಮೊದಲು ಸರ್ಕಾರದ ಅನುಮೋದನೆಯನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.
7. ದಿನಾಂಕ: 27-01-2017ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ವಿಕಾಸ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.

...4.

2. ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
12. ಅಧೀಕ್ಷಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.